ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ನಾಯನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 13.1.17

ಈ ವಾರದ ಮುನ್ಸೂಚನೆ (14.1.17 to 18.1.17 ವರೆಗೆ)

ನಿಯತಾಂಕಗಳು	14.1.17	15.1.17	16.1.17	17.1.17	18.1.17
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	27	28	26	28	29
ಕನಿಷ್ಠ ಉಷ್ಣಾಂಶ (ಡಿ.ಸೆ.)	15	14	12	13	12
ಮೋಡ (ಪ್ರಮಾಣ)	2	2	1	2	2
ಅರ್ದ್ರತೆ ೭.೨೦ ಬೆ (ಶೇ)	93	97	94	75	63
ಅರ್ದ್ರತೆ ೨.೨೦ ಮ (ಶೇ)	49	37	46	28	20
ಗಾಳಿಯ ವೇಗ (ಕಿ.ಮಿ/ಗಂಟೆಗೆ)	16	18	14	13	14
ಗಾಳಿಯ ದಿಕ್ಕು (ಡಿಗ್ರಿ)	111	112	103	77	103

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ **ನಾಯನಹಳ್ಳಿ** ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಮಳೆಯಾಗುವ ಸಂಭವ ಕಡಿಮೆ. ದಿನದ ಗರಿಷ್ಠ ಉಷ್ಣಾಂಶವು 26-29°C ಮತ್ತು ಕನಿಷ್ಠ 12-15°C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 63-97 % ಇದ್ದು, ಮಧ್ಯಾಹ್ನ 20-49 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 13-18 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಕಟಾವು ಮಾಡಿರುವ ಬೆಳೆಗಳನ್ನು ಸ್ವಚ್ಚ ಮಾಡಿ ಒಕ್ಕಣೆ ಮಾಡಿ, ಬಿಸಿಲಿನಲ್ಲಿ ಒಣಗಿಸಿ ಚೀಲದಲ್ಲಿ ಶೇಖರಿಸಿ.
- ಕಟಾವು ಮಾಡಿರುವ ರಾಗಿ, ಜೋಳ ಮತ್ತು ಇತರೆ ಬೆಳೆಗಳನ್ನು ಚೆನ್ನಾಗಿ ಒಣಗಿಸಬೇಕು
- ಹಿಂಗಾರಿನಲ್ಲಿ ಬಿತ್ತನೆಯಾದ ಬೆಳೆಗಳಿಗೆ ನೀರು ಕೊಡಬೇಕು
- ದ್ರಾಕ್ಷಿಯಲ್ಲಿ ಗೊಂಚಲಿನ ಗಾತ್ರ ಮತ್ತು ಹಣ್ಣುಗಳ ಗುಣಮಟ್ಟವನ್ನು ಹೆಚ್ಚಿಸಲು ಗೊಂಚಲಿನಲ್ಲಿ ಪೂರ್ತಿ ಹೂವು ಅರಳುವ ಹಂತದಲ್ಲಿ 20 ಮೀ. ಗ್ರಾಂ ಪ್ರತಿ ಲೀಟರ್ ನೀರಿಗೆ ಮತ್ತು ನಂತರ ಕಾಯಿ ಕಚ್ಚುವ ಹಂತದಲ್ಲಿ (50 ಮೀ. ಗ್ರಾಂ ಪ್ರತಿ ಲೀಟರ್ ನೀರಿಗೆ) ಜಿಬ್ಬೆರ್ಲಿಕ್ ಆಮ್ಲದ ದ್ರಾವಣದಲ್ಲಿ ಅದ್ದುವುದು ಸೂಕ್ತ.
- **ಹೈನುಗಾರಿಕೆ** : ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು. ಕೊಟ್ಟಿಗೆಯನ್ನು ಶುಚಿಯಾಗಿ ಇಟ್ಟುಕೊಳ್ಳುವುದು ಮತ್ತು ಜಾನುವಾರುಗಳನ್ನು ಚಳಿಗಾಳಿಯಿಂದ ರಕ್ಷಿಸಬೇಕು. ಹಾಲು ಕೊಡುವ ಪ್ರಾಣಿಗಳಿಗೆ ಅವು ಕೊಡುವ ಹಾಲಿನ ಆದಾರದ ಮೇಲೆ ಆಹಾರವನ್ನು ಕೊಡಬೇಕು.
- ಮಾವಿನ ಮರಗಳ ಬುಡದ ಪಾತಿಗಳನ್ನು ಸ್ವಚ್ಚಗೊಳಿಸಿ ಲಾಂಟಾನ ಮುಂತಾದ ಕಳೆ ಸಸ್ಯಗಳಿದ್ದರೆ ಬೇರು ಸಮೇತ ಕಿತ್ತು ತೆಗೆಯಬೇಕು.
- **ಜನವರಿ ತಿಂಗಳಲ್ಲಿ ಬೆಳೆಯಬಹುದಾದ ಬೆಳೆ ಹಾಗೂ ತಳಿಗಳು: ಸೂರ್ಯಕಾಂತಿ:** ಮಾರ್ಡೆನ್, ಹೈಬ್ರಿಡ್ ತಳಿಗಳು: ಕೆ.ಬಿ.ಎಸ್.ಹೆಚ್–೧,೪೧, ೪೨,೪೪. **ಶೇಂಗಾ:** ಐ.ಸಿ.ಜಿ.ಎಸ್–೧೧, ಕೆ–೧೩೪, ಜಿ.ಪಿ.ಬಿ.ಡಿ–೪, ಚಿಂತಾಮಣಿ–೨ (ಕೆ.ಸಿ.ಹೆಚ್–೨). **ರಾಗಿ:** ಇಂಡಾಫ್ಟ್–೫ ಜಿ.ಪಿ.ಯು–೨೬, ಜಿ.ಪಿ.ಯು–೪೮, **ಪಾಪ್‌ಕಾರ್ನ್:** ಅಂಬರ್. **ಅಲಸಂದೆ:** ಸಿ–೧೫೨, ಪಿ.ಕೆ.ಬಿ.–೪ (ತರಕಾರಿಗಾಗಿ)

ಸಸ್ಯ ಸಂರಕ್ಷಣೆ:

- ದ್ರಾಕ್ಷಿಯಲ್ಲಿಬೂದಿ ರೋಗದ ಹಾವಳಿ ಉಂಟಾಗುವ ಸಾಧ್ಯತೆ ಇರುವುದರಿಂದ ಅದರ ಹತೋಟಿಗೆ ನೀರಿನಲ್ಲಿ ಕರಗುವ ಗಂಧಕವನ್ನು ಸಿಂಪಡಿಸುವುದು ಸೂಕ್ತ ಅಥವಾ ಕಾರ್ಬೆಂಡಜಿಂ 1.0 ಗ್ರಾಂ ಪ್ರತಿ ಲೀಟರ್‌ನಲ್ಲಿ ಬೆರಸಿ ಸಿಂಪಡಿಸಬೇಕು ಅಥವಾ ಟ್ರೈಡೆಮಾರ್ಫ್ 0.5 ಮಿ.ಲೀ ಪ್ರತಿ ಲೀಟರ್‌ನಲ್ಲಿ ಬೆರಸಿ ಸಿಂಪಡಿಸಬೇಕು.
- **ಮಾವು:** ಸಸ್ಯ ಸಂರಕ್ಷಣಾ ಸಿಂಪರಣೆಯನ್ನು ಮಾಡುವುದು ಸೂಕ್ತ.
- ಮಾವಿನ ಬೆಳೆಯಲ್ಲಿ ಬೂದು ರೋಗ ಕಂಡುಬಂದರೆ, ಸಲ್ಫೆಕ್ಸ್ ಅಥವಾ ಮೈಕ್ಲೊಬ್ಯುಟನಾಲ್ ಅನ್ನು ಬಿಸಿಲು ಕಡಿಮೆ ಇರುವ ಸಮಯದಲ್ಲಿ ಸಿಂಪಡಣೆ ಮಾಡಬೇಕು.
- ಹಣ್ಣಿನ ಮರಗಳ ತೋಟದಲ್ಲಿ (ಮಾವು, ಸೀಬೆ) ನೆಲಕ್ಕೆ ತಾಕುವ ರೆಂಬೆ ಕೊಂಬೆಗಳನ್ನು ಕತ್ತರಿಸಿ ಕೀಟ ರೋಗಗಳಿಂದ ರಕ್ಷಿಸುವುದು.

ನೋಡಲ್ ಅಧಿಕಾರಿ
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು